## 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ

**ಎಸ್.ಸಿ. 5034/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಪ್ರಭು | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಚಿನ್ನಸ್ವಾಮಿ | 08.04.2026 |
| **ವಯಸ್ಸು** | : | 39 ವರ್ಷ | |
| **ವೃತ್ತಿ** | : | ಪೋಲೀಸ್ ಪೇದೆ, ಕೊಳ್ಳೇಗಾಲ ಗ್ರಾಮಾಂತರ ಪೊ.ಠಾಣೆ | **ಪ್ರಾ.ಸಾಃ 16** |
| **ವಾಸ ಸ್ಥಳ** | : | ಕೊಳ್ಳೇಗಾಲ | **ಚಾ.ಸಾಃ 31** |

ಆರೋಪಿಯನ್ನು ವಿ.ಸಿ.ಯ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು, ಅವರಿಗೆ ಧ್ವನಿ ಕೇಳಿಸಲಾಗುತ್ತಿದೆಯಾ ಎಂದು ಪರಿಶೀಲಿಸಿದ ನಂತರ ಅವರ ಹಾಜರಾತಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ಮಾಡಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ಜುಲೈ 2021 ರಿಂದ ಆಗಸ್ಟ್ 2025 ರವರೆಗೆ ಹನೂರು ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 22.05.2025 ರಂದು ತನಿಖಾಧಿಕಾರಿಗಳಗಳು ಠಾಣೆಯಲ್ಲಿ ಆರೋಪಿಯಿಂದ ಆತನ ಬಟ್ಟೆಗಳನ್ನು ಅಮಾತ್ತುಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ನಾನು ನನ್ನ ಮೊಬೈಲ್ ಮೂಲಕ ಚಿತ್ರೀಕರಣ ಮಾಡಿರುತ್ತೇನೆ.

ಮಹಜರ್ ಅನ್ನು ನಿಪಿ 12 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 12(ಬಿ) ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನಿಪಿ 13 ಮತ್ತು 14 ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ದಿನ ಕೃತ್ಯ ನಡೆದ ಸ್ಥಳದಲ್ಲಿ ಆರೋಪಿ ತೋರಿಸಿದಂತೆ ತನಿಖಾಧಿಕಾರಿಗಳು ಮಹಜರ ಕ್ರಮ ಜರುಗಿಸಿದ್ದು, ಸದರಿ ಸಮಯದಲ್ಲಿ ವಿಡಿಯೋ ಚಿತ್ರೀಕರಣವನ್ನು ನನ್ನ ಮೊಬೈಲ್ ಮೂಲಕ ಮಾಡಿರುತ್ತೇನೆ. ನಂತರ ಆರೋಪಿಯು ತಾನು ಕೃತ್ಯಕ್ಕೆ ಉಪಯೋಗಿಸಿದ ಚಾಕುವನ್ನು ಹಾಜರುಪಡಿಸುವುದಾಗಿ ಹೇಳಿದ್ದು, ಆರೋಪಿಯು ನಮ್ಮನ್ನು ಚಾಕು ಎಸೆದಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿ, ಒಂದು ಚಾಕುವನ್ನು ಹಾಜರುಪಡಿಸಿರುತ್ತಾನೆ. ನಂತರ ಆರೋಪಿಯು ತಾನು ಚಾಕುವನ್ನು ಖರೀದಿ ಮಾಡಿದ ಅಂಗಡಿಗೆ ಕರೆದುಕೊಂಡು ಹೋಗಿ, ಅಂಗಡಿಯನ್ನು ತೋರಿಸಿರುತ್ತಾನೆ. ಈ ಎಲ್ಲಾ ಸ್ಥಳಗಳಲ್ಲೂ ತನಿಖಾಧಿಕಾರಿಗಳು ಮಹಜರ್ ಕ್ರಮ ಜರುಗಿಸಿದ್ದು ನಾನು ವಿಡಿಯೋ ಚಿತ್ರೀಕರಣ ಮಾಡಿರುತ್ತೇನೆ. ಮತ್ತು ಮಹಜರಿಗೆ ಸಹಿ ಮಾಡಿರುತ್ತೇನೆ. ಮಹಜರ್ ಅನ್ನು ನಿಪಿ 10 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 10(ಸಿ) ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನಿಪಿ 11, 13 ರಿಂದ 18 ಎಂದು ಈಗಾಗಲೇ ಗುರುತಿಸಲಾಗಿದೆ.

ವಿಡಿಯೋ ಚಿತ್ರೀಕರಣವನ್ನು ಠಾಣಾ ಕಂಪ್ಯೂಟರಿಗೆ ವರ್ಗಾಯಿಸಿ ನಂತರ ಡಿವಿಡಿಗೆ ವರ್ಗಾಯಿಸಿರುತ್ತೇನೆ. ಡಿವಿಡಿಯನ್ನು ನಿಪಿ 27 ಎಂದು ಗುರುತಿಸಲಾಯಿತು. ಈ ಬಗ್ಗೆ ಭಾರತೀಯ ಸಾಕ್ಷಿ ಅಧಿನಿಯಮ ಕಲಂ 63(4)(ಸಿ) ರಂತೆ ದೃಢೀಕರಣವನ್ನು ನೀಡಿರುತ್ತೇನೆ. ದೃಢೀಕರಣವನ್ನು ನಿಪಿ 28 ಎಂದು ಸಾಕ್ಷಿ ಸಹಿಯನ್ನು ನಿಪಿ 28(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ-**

ಕಾನೂನು ಸೇವಾ ಪ್ರಾಧಿಕಾರದಿಂದ ವಕೀಲರನ್ನು ನೇಮಿಸಲಾಗಿದ್ದು, ಸದರಿ ವಕೀಲರು ಗೈರು ಹಾಜರಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ